<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿ.ಸಿ ನಂಬ್ರಃ **543/2017**

ಚಾಸಾ-**12** ಫ್ರಾಸಾ-**10**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಸುದರ್ಶನ ಎಮ್ |
| ತಂದೆಯ ಹೆಸರು | : | ದಿ. ಕೃಷ್ಣ |
| ಪ್ರಾಯ | : | 66 ವರ್ಷ |
| ಉದ್ಯೋಗ | : | ನಿವೃತ್ತ ಸಿ ಪಿ ಐ |
| ವಾಸ | : | ಉಪ್ಪಿನಂಗಡಿ, ಪುತ್ತೂರು |

ದಿನಾಂಕಃ **20-03-2025** ಸಾಕ್ಷಿಗೆ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ದಿಃ 15-10-2013 ರಿಂದ ದಿಃ 14-07-2016 ರವರೆಗೆ ಬೈಂದೂರು ವೃತ್ತದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿಃ 16-01-2016 ರಂದು ಚಾಸಾ-11 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ-1 ರವರ ಮರುಹೇಳಿಕೆ ಪಡೆದಿರುತ್ತೇನೆ. ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 ರಿಂದ ಚಾಸಾ-4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ-2 ರಿಂದ ಚಾಸಾ-4 ರವರು ತಮ್ಮ ಹೇಳಿಕೆಯಲ್ಲಿ ಆರೋಪಿತರು ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುವುದನ್ನು ನೋಡಿರುವುದಾಗಿ ಹೇಳಿರುತ್ತಾರೆ.

ದಿಃ 15-02-2016 ರಂದು ಈ ಪ್ರಕರಣದ ಆರೋಪಿ ಸಂತೋಷ ಶೆಟ್ಟಿರವರು ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಆತನನ್ನು ದಸ್ತಗಿರಿ ಮಾಡಿ ಗೋಪಾಲ ಶೆಟ್ಟಿರವರ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಬ್ರಹ್ಮಲಿಂಗೇಶ್ವರ ದೇವಸ್ಥಾನ ಮುಖ್ತೇಸರರ ದೇವಸ್ಥಾನದ ಜಾತ್ರೆಯ ಬಂದೋಬಸ್ತಿಗಾಗಿ ಸಲ್ಲಿಸಿದ ಕೋರಿಕೆಯನ್ನು ಎಸ್ ಪಿ ರವರಿಗೆ ಸಲ್ಲಿಸಿರುತ್ತೇನೆ. ಆ ಕೋರಿಕೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿ.ಪಿ.10 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-13 ರವರಿಗೆ ಹಸ್ತಾಂತರಿಸಿರುತ್ತೇನೆ.

(ಆರೋಪಿ ಪರ ವಕೀಲರು ಸ್ವಲ್ಪ ಸಮಯದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿದ ಮೇರೆಗೆ ಪ್ರಕರಣವನ್ನು ಇಡಲಾಯಿತು.)

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.

ಮಧ್ಯಾಹ್ನ 12-40 ಕ್ಕೆ ಪ್ರಕರಣವನ್ನು ಪುನಃ ತೆಗೆದುಕೊಳ್ಳಲಾಯಿತು.
ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ. ಹೆಚ್ ಎ ಎಸ್ ಪರವಾಗಿ ಕುಮಾರಿ.ಎಸ್ ಎಸ್ ಯು ರವರಿಂದಃ

ದಿಃ 14-01-2016 ರಂದು ಘಟನೆ ನಡೆದಿರುತ್ತದೆ. ನಾನು ಕಡತವನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಚಾಸಾ-11 ರವರು ತನಿಖೆ ನಡೆಸಿದ್ದರು. ನಾನು ಚಾಸಾ-1 ರವರ ಮರುಹೇಳಿಕೆ ಪಡೆದಿಲ್ಲ ಮತ್ತು ಚಾಸಾ-2 ರಿಂದ ಚಾಸಾ-4 ರವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಈ ಪ್ರಕರಣ ಸಿಲುಕಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.